ಇದೇ ತಾಲ್ಲೂಕಿನ ದಡ್ಡಿಯಲ್ಲಿ 110 ಕೆ.ವಿ. ಸಬ್ ಸ್ಟೇಷನ್ನಿನ ಸ್ಥಾಪನೆ ಬಗ್ಗೆ ಪ್ರಸ್ತಾವನೆಯು ಸದ್ಯಕ್ಕೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮುಂದೆ ಇಲ್ಲದಿರುವುದರಿಂದ, ಈ ವಿದ್ಯುತ್ ಸಬ್ ಸ್ಟೇಷನ್ ಸ್ಥಾಪನೆಯ ಪ್ರಶ್ನೆಯು ಸದ್ಯಕ್ಕೆ ಉದ್ಭವಿಸುವುದಿಲ್ಲ.

ಕರ್ನಾಟಕ ವಿದ್ಯುತ್ ಸುಧಾರಣಾ ಕಾಯಿದೆ 1999ರ ಪ್ರಕಾರ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈಗ ವಿದ್ಯುತ್ ಪ್ರಸರಣ ಕಂಪೆನಿಯಾಗಿದ್ದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನೀಡಿರುವ ಲೈಸೆನ್ಸ್ ಪ್ರಕಾರ 66 ಕೆ.ವಿ. ಮತ್ತು ಅದಕ್ಕೂ ಮೇಲ್ಪಟ್ಟ ವಿದ್ಯುತ್ ವ್ಯವಸ್ಥೆಯ ನಿರ್ಮಾಣ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿರುತ್ತದೆ. ಆದುದರಿಂದ, 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನುಗಳನ್ನು ಸಂಬಂಧಿಸಿದ ವಿದ್ಯುತ್ ವಿತರಣಾ ಲೈಸೆನ್ಸ್‌ದಾರರೇ ನಿರ್ವಹಿಸಬೇಕಾಗಿರುತ್ತದೆ. ಹೀಗಾಗಿ, ಹುಕ್ಕೇರಿ ತಾಲ್ಲೂಕಿನ ಕಣಗಲಾ ಗ್ರಾಮದಲ್ಲಿ 33 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ವಿದ್ಯುತ್ ವಿತರಣಾ ಲೈಸೆನ್ಸುದಾರರಾದ ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುತ್ ಸಹಕಾರ ಸಂಘವು ಕೈಗೊಳ್ಳಬೇಕಾಗಿರುತ್ತದೆ.

ಪ್ರಾದೇಶಿಕ ಅಸಮತೋಲನಾ ಸಮಿತಿ ವರದಿ

739(844) ಶ್ರೀ ಅಪ್ಪಯ್ಯಗೌಡ ಬಸಗೌಡ ಪಾಟೀಲ (ಸಂಕೇಶ್ವರ್) ಮಾನ್ಯ ಯೋಜನಾ, ಸಾಂ.ಹ. ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಾದೇಶಿಕ ಅಸಮತೋಲನಾ ಸಮಿತಿಯು ಸರ್ಕಾರಕ್ಕೆ ವರದಿ ನೀಡಿದೆಯೇ?

ಆ) ನೀಡಿದ್ದಲ್ಲಿ, ವರದಿಯ ಪ್ರಮುಖ ಶಿಫಾರಸ್ಸುಗಳೇನು?

ಇ) ವರದಿಯ ಪ್ರಕಾರ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಈ) ವರದಿಯ ಆಧಾರದ ಮೇಲೆ ಸರ್ಕಾರವು ಬಿಡುಗಡೆ ಮಾಡಬೇಕಾದ ಮೊತ್ತವೆಷ್ಟು ಹಾಗೂ ಬಿಡುಗಡೆ ಮಾಡಿರುವ ಮೊತ್ತವೆಷ್ಟು?

ಶ್ರೀ ಆರ್.ಬಿ. ತಿಮ್ಮಾಪುರ್ (ಯೋಜನಾ, ಸಾಂ.ಹ. ಮತ್ತು ಸಾಂಖ್ಯಿಕ ಸಚಿವರು)

ಅ) - ಹೌದು -

ಆ) ಲಗತ್ತಿಸಿದೆ.

ಇ) ಪ್ರಾದೇಶಿಕ ಅಸಮತೋಲನಾ ನಿವಾರಣಾ ಉನ್ನತಾಧಿಕಾರ ಸಮಿತಿಯ ಶಿಫಾರಸ್ಸುಗಳನ್ನು ಪರಿಶೀಲಿಸಲು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ.

ಈ) ವರದಿಯ ಪ್ರಕಾರ ರೂ. 16,000 ಕೋಟಿ ಗಳಷ್ಟನ್ನು ಬಿಡುಗಡೆ ಮಾಡಬೇಕು. ಹಾಗೂ ಪ್ರಶ್ನೆ ಸಂಖ್ಯೆ (ಇ)ಗೆ ನೀಡಿರುವ ಉತ್ತರದ ಪ್ರಕಾರ ಇದುವರೆವಿಗೆ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಅನುಬಂಧ

ಪ್ರಮುಖವಾದ ಶಿಫಾರಸ್ಸುಗಳು ಈ ಕೆಳಕಂಡಂತಿವೆ:

1. ಪ್ರದೇಶಾಭಿವೃದ್ಧಿ ಮಂಡಳಿಗಳನ್ನು ರದ್ದುಗೊಳಿಸುವುದು.
2. ಉತ್ತರ ಕರ್ನಾಟಕ ಪ್ರದೇಶದ ಕಾರ್ಯನಿರ್ವಹಣೆಗೆ ಸೀಮಿತವಾಗುವಂತೆ ಕರ್ನಾಟಕ ರಾಜ್ಯ ಹಣಕಾಸು ಕಾರ್ಪೊರೇಶನ್ ಸ್ಥಾಪಿಸುವುದು.

3. ಸಚಿವ ಸಂಪುಟದಲ್ಲಿ ಶೇಕಡ 50 ರಷ್ಟು ಪ್ರಾತಿನಿಧ್ಯವನ್ನು ಉತ್ತರ ಕರ್ನಾಟಕಕ್ಕೆ ನೀಡುವುದು ಹಾಗೂ ಸಾರ್ವಜನಿಕ ಉದ್ದಿಮೆ/ಕಾರ್ಪೊರೇಶನ್‌ಗಳು, ಕರ್ನಾಟಕ ಲೋಕಸೇವಾ ಆಯೋಗ, ರಾಜ್ಯ ಯೋಜನಾ ಮಂಡಳಿ, ವಿವಿಧ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳ ಹುದ್ದೆ, ಹಲವಾರು ಆಯೋಗಗಳು, ಸಮಿತಿಗಳು ಹಾಗೂ ಸರ್ಕಾರದಿಂದ ಕಾಲಾನುಕಾಲಕ್ಕೆ ರಚಿತವಾಗುವ 'ಟಾಸ್ಕ್ ಫೋರ್ಸ್' ಗಳಿಗೆ ನೇಮಕಾತಿಯಲ್ಲಿ ಅದೇ ಪ್ರಮಾಣದ ಪ್ರಾತಿನಿಧ್ಯತೆಯನ್ನು ನೀಡುವುದು.
4. ಗುಲ್ಬರ್ಗ ನಗರದ ಕೇಂದ್ರಸ್ಥಾನದಲ್ಲಿ ಉತ್ತರ ಕರ್ನಾಟಕ ಪ್ರದೇಶಕ್ಕೆ ಪ್ರತ್ಯೇಕವಾದ ಕೃಷಿ ಹಣಕಾಸು ಹಾಗೂ ಅಭಿವೃದ್ಧಿ ಕಂಪನಿ ಮತ್ತು ನೀರು ಸರಬರಾಜು ಮಂಡಳಿಗಳನ್ನು ಸ್ಥಾಪಿಸುವುದು.
5. ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವುದು.
6. ನಾಗರೀಕ ಸೌಲಭ್ಯಗಳನ್ನು ಸುಧಾರಿಸಲು ನಗರಾಭಿವೃದ್ಧಿ ಸ್ಥಳೀಯ ಸಂಸ್ಥೆಗಳು ಸಮಂಜಸವಾದ ವಿಶೇಷ ಅಭಿವೃದ್ಧಿ ಶುಲ್ಕವನ್ನು ವಿಧಿಸಲು ಅನುವಾಗುವಂತೆ ನಗರಾಭಿವೃದ್ಧಿ ಸಂಸ್ಥೆಗಳಿಗೆ ಅಧಿಕಾರ ನೀಡುವುದು.
7. ಸಾಕಷ್ಟು ಸಾಲ ವಿಸ್ತರಣೆಯನ್ನು ಖಚಿತಪಡಿಸಿಕೊಳ್ಳಲು ಹೊಸದಾಗಿ ಐದು ಪ್ರಾಂತೀಯ ಗ್ರಾಮೀಣ ಬ್ಯಾಂಕ್‌ಗಳನ್ನು ಸ್ಥಾಪಿಸುವುದು.
8. ಹುಬ್ಬಳ್ಳಿ ನಗರದ ಜೊತೆಗೆ ಗುಲ್ಬರ್ಗ ಮತ್ತು ಬಾಗಲಕೋಟೆಗಳಲ್ಲಿ IT ಪಾರ್ಕ್‌ಗಳ ಸ್ಥಾಪನೆಗೆ ಪರಿಗಣಿಸುವುದು.
9. ಹಾಸನ/ದಾವಣಗೆರೆ ಹಾಗೂ ಬಿಜಾಪುರಗಳಲ್ಲಿ ಎರಡು ಪ್ರತ್ಯೇಕ ಮಹಿಳಾ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದು.
10. ಉತ್ತರ ಕನ್ನಡ ಪ್ರದೇಶದಲ್ಲಿ ಒಂದು ಕೇಂದ್ರ ವಿಶ್ವವಿದ್ಯಾನಿಲಯವನ್ನು - ಬಹುತೇಕ ಗುಲ್ಬರ್ಗ ನಗರದಲ್ಲಿ ಭಾರತೀಯ ತಾಂತ್ರಿಕ ಸಂಸ್ಥೆ, (Indian Institute of Technology) ರಾಯಚೂರಿನಲ್ಲಿ, ಭಾರತೀಯ ಮ್ಯಾನೇಜ್‌ಮೆಂಟ್ ಸಂಸ್ಥೆ (Indian Institute of Management) ಹುಬ್ಬಳ್ಳಿ-ಧಾರವಾಡ ಅಥವಾ ಬೆಳಗಾವಿಯಲ್ಲಿ ಸ್ಥಾಪಿಸುವುದು.
11. 8 ವರ್ಷದ ಅವಧಿಯಲ್ಲಿ - ಅಂದರೆ 2003-10 ರ ವರೆಗೆ 31,000 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಒಂದು ವಿಶೇಷ ಅಭಿವೃದ್ಧಿ ಯೋಜನೆಯನ್ನು ರೂಪಿಸಲು ಸಮಿತಿಯು ಶಿಫಾರಸ್ಸು ಮಾಡಿದೆ. 114 ತಾಲ್ಲೂಕುಗಳಲ್ಲಿ ಈಗಾಗಲೇ ಅನುಷ್ಠಾನಗೊಳಿಸುತ್ತಿರುವ ಸಾಮಾನ್ಯ ಯೋಜನೆಗಳಿಗೆ ಕನಿಷ್ಠ ಪಕ್ಷ 15,000 ಕೋಟಿ ರೂ.ಗಳು ಸಿಗಬಹುದೆಂಬುದಾಗಿ ನಿರೀಕ್ಷಿಸಿದ್ದಾಗ್ಯೂ 16,000 ಕೋಟಿ ರೂ.ಗಳ ನಿವ್ವಳ ಹೆಚ್ಚುವರಿ ಅನುದಾನವು ಈ ವಿಶೇಷ ಯೋಜನೆಗೆ ಬೇಕಾಗಬಹುದು. ಈ 16,000 ಕೋಟಿ ರೂ.ಗಳ ಪೈಕಿ 9,600 ಕೋಟಿ ರೂ.ಗಳನ್ನು (ಪ್ರಶಿಶತ 60 ರಷ್ಟು ಅನುದಾನ) ಉತ್ತರ ಕರ್ನಾಟಕ ಪ್ರದೇಶಕ್ಕೆ ಮತ್ತು 6,400 ಕೋಟಿ ರೂ.ಗಳನ್ನು

(ಪ್ರತಿಶತ 40 ರಷ್ಟು ಅನುದಾನ) ದಕ್ಷಿಣ ಕರ್ನಾಟಕದ ಪ್ರದೇಶಕ್ಕೆ ಸಮಿತಿಯು ಶಿಫಾರಸ್ಸು ಮಾಡಿದೆ.

ಸಣ್ಣ ಉಳಿತಾಯದ ಏಜೆಂಟರಿಗೆ ಕೊಡಬೇಕಾದ ಪ್ರೋತ್ಸಾಹ ಧನ

741(868) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002-2003ನೇ ಸಾಲಿನಲ್ಲಿ ಸಣ್ಣ ಉಳಿತಾಯ ಸಂಗ್ರಹ ಮೊತ್ತದ ಗುರಿ ಎಷ್ಟು;

ಆ) ಏಜೆಂಟರಿಗೆ ಕೊಡಬೇಕಾದ ಪ್ರೋತ್ಸಾಹ ಧನದಲ್ಲಿ ಬಾಕಿ ಇರುವ ಹಣ ಎಷ್ಟು ಯಾವ ಸಾಲಿನಿಂದ ಬಾಕಿ ಇದೆ. ಯಾವ ಕಾರಣಕ್ಕಾಗಿ ಬಾಕಿ ಇದೆ?

ಶ್ರೀ ಬಾಬುರಾವ್ ಚಿಂಚನೂರ್ (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು)

ಅ) 2002-2003ನೇ ಸಾಲಿನಲ್ಲಿ ಸಣ್ಣ ಉಳಿತಾಯ ಸಂಗ್ರಹಣೆ ಗುರಿ ಈ ಕೆಳಕಂಡಂತಿದೆ:

ರೂ. ಕೋಟಿಗಳಲ್ಲಿ

ಒಟ್ಟು	ನಿವ್ವಳ
5670.00	1890.00

ಆ) ಏಜೆಂಟರಿಗೆ ಕೊಡಬೇಕಾದ ಪ್ರೋತ್ಸಾಹ ಧನದ ಬಾಕಿ ವಿವರಗಳು ಈ ಕೆಳಗಿನಂತಿದೆ :

ರೂ. ಕೋಟಿಗಳಲ್ಲಿ

ಸಾಲು	ಮೊತ್ತ
2000-01	14.20
2001-02	30.00

ಹಣದ ಆಧರಿಸಿ ಪ್ರೋತ್ಸಾಹ ಧನ ಬಿಡುಗಡೆ ಮಾಡಲಾಗುತ್ತಿರುವುದರಿಂದ ಈ ರೀತಿ ಬಾಕಿ ಇದೆ.

ಸಣ್ಣ ನೀರಾವರಿ ಇಲಾಖೆಯಲ್ಲಿ ಗುತ್ತಿಗೆದಾರರಿಗೆ ನೀಡಬೇಕಾಗಿರುವ ಬಾಕಿ ಹಣ

742(870) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ನೀರಾವರಿ ಇಲಾಖೆಯಲ್ಲಿ ಗುತ್ತಿಗೆದಾರರಿಗೆ ಸಂದಾಯವಾಗಬೇಕಾಗಿರುವ ಬಾಕಿ ಹಣ ಎಷ್ಟು ;

ಆ) ಎಷ್ಟು ವರ್ಷಗಳಿಂದ ಬಾಕಿ ಇದೆ.

ಇ) ಬಾಕಿ ಹಣ ಸಂದಾಯ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಸನೀ. (ದ) ವಲಯ ಫೆಬ್ರವರಿ 2003 ರವರೆಗೆ	-	5193.69 ಲಕ್ಷ ರೂ.
ಸ.ನೀ. (ಉ) ವಲಯ (ಜನವರಿ 2003 ರವರೆಗೆ)	-	6346.95 ಲಕ್ಷ ರೂ.
		11540.64 ಲಕ್ಷ ರೂ.